ಪರದೆಯಿಂದ ಕಣ್ಣು ಕೀಳದೆ, ಪ್ರತಿಯಾಡಿದ,

"ಒಂದು ಕೊನೆಯ ಸಂಶಯ ನಿವಾರಣೆಗಾಗಿ ನಿಶಾಚರಿಯಾಗಬೇಕಾಯ್ತು. ಪ್ರಸಾದ್, ನೀನೀಗ ತುಸು ಚುರುಕಾಗಬೇಕು. ನಾವೀಗ ವಿರಾಜಪೇಟೆಯ ಪ್ರಾಣಿ ಸಂಗ್ರಹಾಯಲಕ್ಕೆ ಹೋಗಬೇಕು. ಅದಕ್ಕೆ ಮುನ್ನ ವೃತ್ತ ನಿರೀಕ್ಷಕ ಡಿಸೋಜನನ್ನು ಭೇಟಿಯಾಗಬೇಕು. ಅವನ ನೆರವು ನಮ್ಗೆ ಇವತ್ತು ತೀರಾ ಅವಶ್ಯ."

ಸುಮಾರು ಮುಕ್ಕಾಲು ತಾಸಿನಲ್ಲಿ, ನಮ್ಮ ಕಾರು ಗ್ರಾಮಾಂತರ ಠಾಣೆಯ ಹಾದಿ ಹಿಡಿದಿತ್ತು. ನಾನಂತೂ ಮುಂದಿನ ಘಟನೆಗಳ ಬಗ್ಗೆ ಬಹಳಷ್ಟು ಉತ್ಸುಕನಾಗಿದ್ದೆ. ಕರಮಚಂದ ಮಾತ್ರ ಯಾಕೋ ತುಸು ಗಂಭೀರವಾಗೇ ಇದ್ದ.

"ಓಹ್, ಕರಮಚಂದ್, ಏನು ಬೆಳಿಗ್ಗೇನೆ ನಿಮ್ಮ ಸವಾರಿ ಆಗಮಿಸಿದೆ? ತಾಪಂಡ ಮೋಹಿತನ ಪ್ರಕರಣದ ಬಗ್ಗೆ ಅಲ್ಲ ಅಂದ್ಕೋತಿನಿ"

ವೆಲೆಂಟೈನ್ ಡಿಸೋಜ ತಮಾಷೆಯಾಗಿ ಹೇಳಿದ.

"ನಿಮ್ಗೇನಾದ್ರೂ ಗೊತ್ತಾಯ್ತೆ ಆತನ ಸಮಾಚಾರ?"

ಕರಮಚಂದನ ಪ್ರಶ್ನೆಗೆ ಆತ ದೊಡ್ಡದಾಗಿ ನಕ್ಕ. ಏನೂ ಗೊತ್ತಾಗಿಲ್ಲವೆಂಬುದನ್ನು ಆತನ ನಗುವೇ ಹೇಳುತ್ತಿತ್ತು.

"ಡಿಸೋಜ, ನೀನೀಗ ನಾಲ್ಕು ಮಂದಿ ಪೇದೆಗಳೊಂದಿಗೆ ತಕ್ಷಣ ಹೊರಡಬೇಕು! ಸರ್ವೀಸ್ ರಿವಾಲ್ವರ್ ಜೊತೆಗಿರಲಿ. ಉಪಯೋಗಕ್ಕೆ ಬೀಳಬಹುದು."

ಕಕ್ಕಾಬಿಕ್ಕಿಯಾಗಿ ದಿಟ್ಟಿಸಿದ ಅಧಿಕಾರಿ. ಕರಮಚಂದ ಎಂದಿಗೂ ತಮಾಷೆ ಮಾಡುವವನಲ್ಲವೆಂದು ಅರಿತಿದ್ದ ಡಿಸೋಜ ತಕ್ಷಣ ತನ್ನ ಮಂದಿಯೊಂದಿಗೆ ಅಣಿಯಾದ. ನಮ್ಮ ಸವಾರಿ ಪ್ರಾಣಿ ಸಂಗ್ರಹಾಲಯದತ್ತ ಚಲಿಸಿತು.

ನಮ್ಮನ್ನು ಸ್ವಾಗತಿಸಿದವನು ಅಲ್ಲಿಯ ನಿರ್ವಾಹಕ ಉದ್ದಪಂಡ ಚೆಂಗಪ್ಪ. ವರ್ಷಿಣಿಯ ಪ್ರಿಯಕರ! ನಾವು ಅವನನ್ನು ಮೊದಲ ಬಾರಿಗೆ ಭೇಟಿಯಾಗುತ್ತಿದ್ದೆವು.

"ಡಿಸೋಜ, ನಾನೀಗ ಮೋಹಿತನ ಚರವಾಣಿಗೆ ಕರೆ ಮಾಡ್ತೀನಿ. ಏನಾಗುತ್ತೆ ಅಂತ ನೀವೇ ನೋಡಿ."

ಮೊದಲಿಗೆ 'ನಾಟ್ ರೀಚೆಬಲ್' ಎಂಬ ಸಂದೇಶ ತೇಲಿ ಬಂತು. ನಾವು ಮೃಗಾಲಯದೊಳಕ್ಕೆ ತುಸುವೇ ಸರಿಯುತ್ತಿದ್ದಂತೆ, ತಡೆ ತಡೆದು ಕರೆದನಿ ಕೇಳತೊಡಗಿತು! ಕರಮಚಂದ ಎಡಕ್ಕೆ ತಿರುಗಿ, ಚುರುಕಿನ ಹೆಜ್ಜೆ ಹಾಕಿದ. ನಾವು ಹಿಂಬಾಲಿಸಿದೆವು. ಕೊಂಚ ದೂರ ಕ್ರಮಿಸಿದಾಗ, ಕರೆದನಿ ಇನ್ನಷ್ಟು ಸ್ಫುಟವಾಯಿತು. ಜೊತೆಗೆ ಸನಿಹದಲ್ಲೆಲ್ಲೋ ಜಂಗಮವಾಣಿಯ ರಿಂಗಣ ಕೂಡಾ ಕಿವಿಗಪ್ಪಳಿಸಿತು!!

ಸರೀಸೃಪಗಳನ್ನು ಇರಿಸಿದ್ದ ಜಾಗದಲ್ಲಿ ನಾವಿದ್ದೆವು. ನಮ್ಮೆದುರು ಇದ್ದಿದ್ದು ಮೊಸಳೆಗಳನ್ನು ಕೂಡಿ ಹಾಕಿದ್ದ ತಾಣ. ಎತ್ತರದ ಆವರಣದೊಳಕ್ಕೆ ಹತ್ತಾರು ಮೊಸಳೆಗಳು ಬಾಯಿ ತೆರೆದು ಮಲಗಿದ್ದವು.ಅದರ ಪಕ್ಕದಲ್ಲಿ ದೊಡ್ಡದಾದ ಬೋನು. ಅದರೊಳಗೆ ಇದ್ದ ದೊಡ್ಡ ಮರದ ಪಟ್ಟಿಗೆಯೊಳಗಿನಿಂದ ಸದ್ದು ಕೇಳಿ ಬರುತ್ತಿತ್ತು! ಚೆಂಗಪ್ಪ ಚಕಿತಗೊಂಡಿದ್ದ. ನಮ್ಮ ಸೂಚನೆಯಂತೆ ಆಳೊಬ್ಬ ಬೋನಿನೊಳಕ್ಕೆ ಹೋಗಿ, ಪೆಟ್ಟಿಗೆಯೊಳಗಿನಿಂದ ಚರವಾಣಿಯೊಂದನ್ನು ಹೊರತಂದ!

"ಇದು ಮೋಹಿತನ ಚರವಾಣಿ! ಆತನ ಮೊಬೈಲ್ ಮಾರ್ಕೆಟ್ ಟವರಿನ ಪರಿಧಿಯೊಳಗೆ ಇದೆಯಂತ ತಿಳಿದುಬಂತು. ತಕ್ಷಣ ಅದು ಮೃಗಾಲಯದೊಳಕ್ಕೆ ಇರಬೇಕು ಅಂತ ಊಹಿಸ್ದೆ. ನಿನ್ನೆ